ರೀತಿ ಬೆಂಕಿ ಹಚ್ಚುವುದೇ ಅವರ ಕೆಲಸ. ಕಾಂಗ್ರೆಸ್‌ನವರು ಅಲ್ಲಿ ಮತ್ತು ಇಲ್ಲಿಯೂ ಕೂಡ ಬೆಂಕಿ ಹಚ್ಚಿದ್ದಾರೆ. ಈ ರೀತಿ ರಾಜಕಾರಣ ಮಾಡಿಕೊಂಡು. ವೋಟು ತೆಗೆದುಕೊಳ್ಳತಕ್ಕಂಥ ಕೆಲಸ ಅವರು ಮಾಡುತ್ತಾರೆ. ಜಾತಿ ರಾಜಕಾರಣ ಮಾಡಿಕೊಂಡು ವೋಟು ಬ್ಯಾಂಕ್ ತೆಗೆದುಕೊಳ್ಳುವಂಥದ್ದು ಕಾಂಗ್ರೆಸ್ ಪಕ್ಷದ ನೀತಿಯಾಗಿದೆ. ಇದನ್ನು ಬಿಟ್ಟು ಬೇರೇನೂ ಇಲ್ಲ. Divide and rule,

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಿಯಮಾವಳಿಗಳನ್ನು ಮೀರಿ ನಾವು ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಈ ಸದನ ಯಾವ ರೀತಿ ಹೋಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಿ.

ಅಧ್ಯಕ್ಷರು : ನಿಯಮಾವಳಿ ರೀತ್ಯಾ ಚರ್ಚೆ ಮಾಡುವುದಕ್ಕೆ ಇಲ್ಲಿ ಯಾರೂ ಸಿದ್ದರಿಲ್ಲದೇ ಇದ್ದರೆ ನಾನೇನು ಮಾಡಬೇಕೆಂದು ನೀವೇ ಹೇಳಿ ?

ಶ್ರೀ ಎಂ.ಪಿ. ಪ್ರಕಾಶ್ : ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ನಿಯಮ 73ರ ಅಡಿಯಲ್ಲಿ ಚರ್ಚೆ ಮಾಡುತ್ತಿರುವ ವಿಷಯದ ಬಗ್ಗೆ ಚರ್ಚೆಯನ್ನು ಮುಕ್ತಾಯ ಮಾಡಲಾಗಿದೆ ಎಂದು ಹೇಳಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು : ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಇನ್ನು ಸೃಷ್ಟೀಕರಣ ನೀಡಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನಮ್ಮ ಉತ್ತರನವನ್ನು ಈಗಾಗಲೇ ಹೇಳಿದ್ದೇನೆ. ಮತ್ತೆ ಸೃಷ್ಟೀಕರಣ ಕೂಡ ಆಗಿದೆ. ನಿಯಮಕ್ಕೆ ಸಂಬಂಧವಿಲ್ಲದ ವಿಷಯದ ಬಗ್ಗೆ ಭಾಗವಹಿಸಿದರೆ ಹೇಗೆ ?

ಅಧ್ಯಕ್ಷರು : ಸರ್ಕಾರದ ಉತ್ತರವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಮಾನ್ಯ ನಾಯ್ಡುರವರೆ, ತಾವು ಕುಳಿತುಕೊಳ್ಳಿ. ಈಗ ಮುಂದಿನ ವಿಷಯಕ್ಕೆ ಹೋಗೋಣ. ಮಾನ್ಯ ಎಂ.ಟಿ. ಕೃಷ್ಣಪ್ಪನವರು ಗಮನ ಸೆಳೆಯುವ ಸೂಚನೆ ಬಗ್ಗೆ ಪ್ರಸ್ತಾಪ ಮಾಡಬೇಕಾಗಿತ್ತು. ಅವರ್ಯಾರೂ ಇಲ್ಲವೆಂದು ಕಾಣುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಮ್ಮದೊಂದು ಹಕ್ಕು ಚ್ಯುತಿ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ. ಮದುವೆಯ ವಿಚಾರದ ಬಗ್ಗೆ ಬಹಳ ಪ್ರಾಮುಖ್ಯವಾದಂಥ ಒಂದು ಖಾಸಗಿ ನಿರ್ಣಯವನ್ನು ಕಳುಹಿಸಿದ್ದೇನೆ. ಅದರ ಬಗ್ಗೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು.

6. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಇನ್ಸ್‌ಪೆಕ್ಟರ್ ಒಬ್ಬರು ಶಾಸಕರ ಜೊತೆ ಅಸಭ್ಯವಾಗಿ ವರ್ತಿಸಿದ ಬಗ್ಗೆ ; ಹಕ್ಕುಚ್ಯುತಿ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಗದೀಶ್ ಶೆಟ್ಟರ್ : ಒಬ್ಬ ಇನ್ಸ್‌ಪೆಕ್ಟರ್ ಶಾಸಕರ ಜೊತೆ ಅಸಭ್ಯವಾಗಿ ವರ್ತನೆ ಮಾಡುತ್ತಿದ್ದಾನೆ. ಇದರಿಂದ ಜನಪ್ರತಿನಿಧಿಯಾಗಿ ಕೆಲಸನವನ್ನು ಸರಿಯಾಗಿ ನಿರ್ವಹಿಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಮಾನ್ಯ ಕಳಸಪ್ಪ ಗುರುಶಾಂತಪ್ಪ ಬಂಡಿಯವರಿಗೆ ಬಹಳಷ್ಟು ದೌರ್ಜನ್ಯವಾಗಿದೆ. ಆದ್ದರಿಂದ ಈ ವಿಷಯದ ಬಗ್ಗೆ ಅವರು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಕಾರ್ಯಾಲಯದಲ್ಲಿ ಕೇಳಿದಾಗ ಇಂದು ಸಂಜೆ 6.00 ಗಂಟೆಯವರೆಗೆ ಇಲ್ಲಿ ಕುಳಿತು ಚರ್ಚೆ ಮಾಡೋಣವೆಂದು ಹೇಳಿದ್ದೀರಿ.

ಅಧ್ಯಕ್ಷರು : ಈ ಸಭೆ ಒಪ್ಪುವುದಾದರೆ ಸಂಜೆ 6.00 ಗಂಟೆಯವರೆಗೂ ಇಲ್ಲಿ ಕುಳಿತುಕೊಳ್ಳುವುದಕ್ಕೆ ನಾನು ಸಿದ್ದನಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮದುವೆಯ ವಿಷಯದ ಬಗ್ಗೆ ತಂದಿರತಕ್ಕಂಥ ಖಾಸಗಿ ನಿರ್ಣಯದ ಬಗ್ಗೆ ಇಂದು 6.00 ಗಂಟೆಯವರೆಗೆ ಚರ್ಚೆ ಮಾಡೋಣ ಎಂದು ತಾವು ಹೇಳಿದ್ದೀರಿ.

ಅಧ್ಯಕ್ಷರು : ಸಭೆಯು ನಡೆಯುವುದಕ್ಕೆ ನಾನೇನೂ ಅಡ್ಡಿ ಮಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಸಂಜೆ 6.00 ಗಂಟೆಯವರೆಗೆ ಕುಳಿತುಕೊಂಡು ಚರ್ಚೆ ಮಾಡೋಣವೆಂದು ತಮ್ಮ ಕಾರ್ಯಾಲಯದಲ್ಲಿ ಚರ್ಚೆಯಾದಂಥ ಸಂದರ್ಭದಲ್ಲಿ ತಾವು ಹೇಳಿದ್ದೀರಿ. ಖಾಸಗಿ ನಿರ್ಣಯವನ್ನು ಈಗ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಬೇಕಾದರೆ ಒಂದು ಗಂಟೆ ಸದನವನ್ನು ಮುಂದೂಡಿ ಮತ್ತೆ ಸದನ ಸೇರಬೇಕು. ಮತ್ತೆ ಸದನದ ಸೇರಿದಾಗ ಯಾರೇ ಹೋದರೂ ನಾನು ಮತ್ತು ಮಾನ್ಯ ರಮೇಶ್‌ಕುಮಾರ್ ಇದ್ದೇ ಇರುತ್ತೇವೆ. ನಾವಿಬ್ಬರು ಇದ್ದರೂ ಕೂಡ ಇದರ ಬಗ್ಗೆ ಚರ್ಚೆಯಾಗಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಮತ್ತೆ ಸದನದ ಸೇರಿದ ನಂತರ ಕೋರಂ ಇಲ್ಲದಿದ್ದರೆ. ನನ್ನ ಜೊತೆಗೆ ಇನ್ನೂ 13 ಜನರನ್ನು ಕರೆದು ಕೊಂಡು ಬಂದು ಈ ಸದನದಲ್ಲಿ ಕೂರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಇವತ್ತು ಚರ್ಚೆಯಾಗಲೇಬೇಕು.

ಅಧ್ಯಕ್ಷರು : ರೋಣ್ ಸರ್ಕಲ್ ಇನ್ಸ್‌ಪೆಕ್ಟರ್ ಅಮರೇಶ ಬಾರೆಕರ್‌ರವರಿಂದ ಹಕ್ಕು ಚ್ಯುತಿ ಆಗಿರುವ ಬಗ್ಗೆ ಮಾನ್ಯ ಕಳಸಪ್ಪ ಗುರುಶಾಂತಪ್ಪ ಬಂಡಿಯವರು ಒಂದು ಪತ್ರವನ್ನು ಕಳುಹಿಸಿದ್ದಾರೆ. ಇದರ ಬಗ್ಗೆ ವರದಿ ತರಿಸುವುದಕ್ಕೆ ಸರ್ಕಾರಕ್ಕೆ ಕಳುಹಿಸಿದ್ದೇವೆ. ಆದ್ದರಿಂದ ಹಕ್ಕುಚ್ಯುತಿ ಈಗ ಬರುವುದಿಲ್ಲ. ಆ ವರದಿ ಬಂದನಂತರ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರದಿಂದ ವರದಿ ತರಿಸಲಿ. ಆದರೆ ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶ ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ : ವರದಿಯನ್ನು ತರಿಸದೆ ಈ ವಿಷಯದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಈಗ ಅದು ಹಕ್ಕುಚ್ಯುತಿಗೆ ಬರುವುದಿಲ್ಲ. ವರದಿ ತರಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇನೆಂದು ನಾನು ಈಗಾಗಲೇ ಹೇಳಿದ್ದೇನೆ. ದಯಮಾಡಿ ತಾವೆಲ್ಲರೂ ಸಹ ಸಹಕರಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ : ನಿಯಮಾವಳಿ ಪ್ರಕಾರ ಹಕ್ಕುಚ್ಯುತಿ ಬಗ್ಗೆ ಈಗ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಸಹಕರಿಸಿ. ಈಗ ವಿತ್ತೇಯ ಕಾರ್ಯಕಲಾಪಗಳ ಬಗ್ಗೆ ಚರ್ಚೆಯನ್ನು ಪ್ರಾರಂಭಮಾಡೋಣ. ಇದಕ್ಕೆ ಸರ್ಕಾರದವರು ಮತ್ತೆ ತಾವು ಏನು ಹೇಳುತ್ತೀರಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ. ನಾವು ತಯಾರಿದ್ದೇವೆ. ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ಚರ್ಚೆ ನಡೆಯಲಿ.